ಸಭ್ಯಸ್ತೆ ಥರ ಮಾತಾಡಿದ್ರೆ ನಂಬಕ್ಕೆ ನಾನೇನು ಮಳ್ಳೀನಾ? ಇನ್ನು ಈ ಮನೆ ಮೆಟ್ಲು ತುಳಿದ್ರೆ ನೋಡು" ಎಂದು ಗೌಡತಿ ಕೂಗುವ ಹೊತ್ತಿಗೆ ಬೀರ ಅಂಗಳಕ್ಕೆ ಬಂದ.

ಅಮ್ಮನ ಅಳು, ಗೌಡತಿಯ ಕೂಗು ಕೇಳಿ ಬೆಪ್ಪು ಮುಖದಲ್ಲಿ ಈರಿಯ ಪಕ್ಕ ನಿಂತಿದ್ದ ಪುಟ್ಟನನ್ನು ಕಂಡ ಬೀರನಿಗೆ ಅವನು ಬಾಳೆಹಣ್ಣು ಕದ್ದು ತಿಂದ ಎಂದು ಗೋವಿಂದ ಹೇಳಿದ್ದು ನೆನಪಾಗಿ ಸಿಟ್ಟೇರಿ, ಪುಟ್ಟನ ರಟ್ಟೆ ಹಿಡಿದು ಕದೀತೀಯ ಕಳ್ ನನ್ ಮಗ್ನೆ ಅಂತ ಅಂಡಿನ ಮೇಲೆ ಎರಡು ಬಾರಿಸಿದ. ದಾರಿಯಲ್ಲಿ ಬರುವಾಗ ದುಡ್ಡು ಎಲ್ಲಿ ಹೋಯಿತು ಎಂದು ಯೋಚಿಸುತ್ತಿದ್ದ ಬೀರನಿಗೆ ಬಾಳೆಹಣ್ಣು ಕದ್ದಂತೆ ದುಡ್ಡನ್ನೂ ತಾನು ಮಲಗಿದಾಗ ಪುಟ್ಟ ಕದ್ದಿದಾನೆ ಅನಿಸಿಬಿಟ್ಟಿತ್ತು. ಬಾಳೆಹಣ್ಣನ್ನು ಕದ್ದರೆ ಕದಿಯಲಿ, ಆದರೆ ತನ್ನ ದುಡ್ಡು ಕದಿಯುವುದೆಂದರೆ... ಬೀರ ಮತ್ತೆರಡು ಬಾರಿಸಿದ. ತನಗೆ ಯಾಕೆ ಅಪ್ಪ ಹೊಡೆಯುತ್ತಿದ್ದಾನೆ ಎಂಬುದೇ ಗೊತ್ತಾಗದ ಪುಟ್ಟ ಅಮ್ಮನ ಹಿಂದೆ ಅಡಗಿದ. ಈರಿ ಮಗನನ್ನು ಎಳೆದು ತಬ್ಬಿಕೊಂಡು, ''ಕದ್ದೋರು ನೀವು, ಈಗ ಮಗನಿಗೆ ಹೊಡೀತೀರಾ?'' ಎಂದು ಕೂಗಿದಳು. ಅವಳ ಆ ಮಾತು ಕೇಳಿದ ಕೂಡಲೇ ಗೌಡರಿಗೆ ಸೋಮಣ್ಣ ಹೇಳಿದ್ದು ಸುಳ್ಳಲ್ಲ ಅನಿಸಿ, "ಯಾವಾಗ ಕದ್ಯೋ, ಬಾಯ್ಬಿಡು, ಇಲ್ದಿದ್ರೆ ಚರ್ಮ ಸುಲೀತೀನಿ" ಅಂತ ಬೀರನನ್ನು ನೋಡುತ್ತಾ ಕೂಗಿದರು. ಬೀರ ಕಂಗಾಲಾದ. ತಾನು ಹೆಂಡತಿಯ ಎದುರೇ ದುಡ್ಡು ತೆಗೆದುಕೊಂಡು ಹೋಗಿದ್ದೆ. ಆದರೆ, ಈ ರಂಡೆ ಬೀರ ಕದ್ದಿದಾನೆ ಅಂತ ಗೌಡರಿಗೆ ದೂರು ಕೊಟ್ಟಿದಾಳೆ ಎಂದನಿಸಿತು. ಅವನು ಸಾವರಿಸಿಕೊಳ್ಳುತ್ತಿರುವಾಗ, ಗೌಡತಿ, "ಸರಿ ಆಯ್ತು, ಗಂಡ ಕಳ್ಳ, ಹೆಂಡತಿ ಹಾದರಗಿತ್ತಿ" ಅಂದುಬಿಟ್ಟಳು. ಆ ಮಾತು ಕೇಳಿದ್ದೇ ಬೀರ ಹೆಂಡತಿಯತ್ತ ತಿರುಗಿ, "ಓಹೋ... ನಿನ್ ಹತ್ರ ಇದ್ದ ದುಡ್ಡು ಹಾದರ ಮಾಡಿ ಬಂದಿದ್ದಾ? ಯಾವಾಗಿಂದ?" ಎಂದು ಕೂಗಿದ.



ಬೀರನ ಆ ಮಾತು ಕೇಳಿ ಈರಿಗೆ ಎದೆಗೆ ಗುದ್ದಿದಂತಾಯಿತು. ಅವಳ ಹತ್ತಿರ ದುಡ್ಡು ಇತ್ತು ಎಂಬುದನ್ನು ಬೀರನೇ ಹೇಳಿದ ಮೇಲೆ ಗೌಡತಿಗೆ ಅವಳ ಬಗ್ಗೆ ಹುಟ್ಟಿದ ಅನುಮಾನ ಪಕ್ಕಾ ಆಗಿ, "ಇನ್ನು ಮೆಟ್ಲು ಹತ್ಬೇಡ" ಎಂದು ಮತ್ತೆ ಕೂಗಿದಳು. ಗೌಡತಿಯ ಮಾತಿಂದ ಮೊದಲೇ ನೊಂದಿದ್ದ ಆಕೆ ಈಗ ಗಂಡನೂ ಅದನ್ನೇ ಹೇಳಿದ್ದು ಕೇಳಿ ಯಾರ ಮಾತಿಗೂ ಉತ್ತರವನ್ನು ಕೊಡದೆ ಮಗನ ಕೈಹಿಡಿದು ರಸ್ತೆಗಿಳಿದಳು. ಜಗತ್ತೇ ತನ್ನ ವಿರುದ್ಧ ಮಸಲತ್ತು ಮಾಡುತ್ತಿದೆ ಅನಿಸಿತು. "ಎಲ್ಲಿಗೆ ಹೊರಟ್ಯೇ" ಎಂದು ಬೀರ ಕೂಗಿದ.

ಮಗನ ಕೈ ಹಿಡಿದು ಎಳೆಯುತ್ತ ಯಾರಿಗೂ ಉತ್ತರ ಕೊಡದೆ ಈರಿ ನಡೆದಳು. ಪುಟ್ಟ, ''ಎಲ್ಲಿಗೆ ಹೋಗೋದು'' ಅಂದ.

''ಕೆರೆಗೆ ಹಾರೋಣ ಬಾ'' ಅಂತ ಈರಿ ಅಂದಳು. ಹಿಂದಿನ ದಿನ ಕೆರೆಯಲ್ಲಿ ಹಾವು ನೋಡಿದ್ದ ಪುಟ್ಟ, ''ಹಾವಿದೆ ಕೆರೇಲಿ, ಬ್ಯಾಡ'' ಅಂದ. ''ಇಲ್ಲಿ, ನೆಲದ ಮೇಲೆ ಬರೀ ಪಿಶಾಚಿಗಳು ಇದಾವೆ'' ಎನ್ನುತ್ತಾ ಊರಿನ ಹೊರಗೆ ಇದ್ದ ಕೆರೆಯತ್ತ ಈರಿ ಹೆಜ್ಜೆ ಹಾಕಿದಳು.

## ಮೃತ್ಯುಂಜಯ ಹೊಸಮನೆ

ಸಾಗರ ತಾಲ್ಲೂಕಿನ ಪುಟ್ಟ ಹಳ್ಳಿಯಯೊಂದರಲ್ಲಿ ಜನನ. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ. ಬ್ಯಾಂಕಿನಲ್ಲಿ 26 ವರ್ಷ ಉದ್ಯೋಗ. ಬಳಿಕ ಸ್ವಯಂ ನಿವೃತ್ತಿ ಪಡೆದು ಕೃಷಿಕರಾಗಿದ್ದಾರೆ.